

# ರೆಟಿನಲ್ ವೇನ್ ಅಕ್ಲೂಶನ್ (ರೆಟಿನಲ್ ಸಿರೆ ಮುಚ್ಚುವಿಕೆ)


## ರೆಟಿನಲ್ ವೇನ್ ಅಕ್ಲೂಶನ್ ನ ರೋಗಲಕ್ಷಣಗಳು, ತಡೆಗಟ್ಟುವಿಕೆ ಮತ್ತು ಚಿಕಿತ್ಸೆ






# ರೆಟಿನಲ್ ವೇನ್ ಅಕ್ಲೂಶನ್ (ಆರ್‌ವಿಓ) ಎಂದರೇನು?

ರೆಟಿನಲ್ ವೇನ್ ಅಕ್ಲೂಶನ್ ಅನ್ನು ಕೆಲವೊಮ್ಮೆ "ಕಣ್ಣಿನ ಪಾರ್ಶ್ವವಾಯು" ಎಂದು ಕರೆಯಲಾಗುತ್ತದೆ. ಇದು ನಿಮ್ಮ ರೆಟಿನಾದಿಂದ ನಿಮ್ಮ ಹೃದಯಕ್ಕೆ ರಕ್ತವನ್ನು ಹಿಂತಿರುಗಿಸುವ ಒಂದು ರಕ್ತನಾಳದಲ್ಲಿನ ಅಡಚಣೆಯಾಗಿದೆ. ನಿಮ್ಮ ರೆಟಿನಾದ ರಕ್ತನಾಳಗಳಲ್ಲಿನ ರಕ್ತ ಹೆಪ್ಪುಗಟ್ಟುವಿಕೆ ಅಥವಾ ದ್ರವದ ಶೇಖರಣೆಯಿಂದ ಉಂಟಾಗುವ ಅಡಚಣೆಗಳು, ಬೆಳಕನ್ನು ಫಿಲ್ಟರ್ ಮಾಡುವ ನಿಮ್ಮ ರೆಟಿನಾದ ಸಾಮರ್ಥ್ಯವನ್ನು ಮತ್ತು ನಿಮ್ಮ ದೃಷ್ಟಿಯ ಸಾಮರ್ಥ್ಯವನ್ನು ದುರ್ಬಲಗೊಳಿಸುತ್ತದೆ. ದೃಷ್ಟಿ ನಷ್ಟದ ತೀವ್ರತೆಯು ಯಾವ ರಕ್ತನಾಳವು ನಿರ್ಬಂಧಕ್ಕೆ ಒಳಗಾಗಿದೆ ಎಂಬುದರ ಮೇಲೆ ಅವಲಂಬಿತವಾಗಿರುತ್ತದೆ.





# ಆರ್‌ವಿಓ ಪ್ರಕಾರಗಳು


ರೆಟಿನಲ್ ವೇನ್ ಅಕ್ಲೂಶನ್ ನಲ್ಲಿ ಎರಡು ವಿಧಗಳಿವೆ: ಸೆಂಟ್ರಲ್ ರೆಟಿನಲ್ ವೇನ್ ಅಕ್ಲೂಶನ್ (ಸಿಆರ್‌ವಿಓ) ಎಂಬುದು ಕೇಂದ್ರ ರೆಟಿನಲ್ ರಕ್ತನಾಳದ ಅಡಚಣೆಯಾಗಿದೆ ಮತ್ತು ಬ್ರಾಂಚ್ ರೆಟಿನಲ್ ವೇನ್ ಅಕ್ಲೂಶನ್ (ಬಿಆರ್‌ವಿಓ) ಎಂಬುದು ಸಣ್ಣ ಉಪ-ರಕ್ತನಾಳದ ಅಡಚಣೆಯಾಗಿದೆ. ರೆಟಿನಾದ ರಕ್ತನಾಳದಲ್ಲಿ ಅಡಚಣೆ ಉಂಟಾದಾಗ, ರೆಟಿನಾದಿಂದ ರಕ್ತವನ್ನು ಹೊರಸಾಗಿಸಲು ಅದಕ್ಕೆ ಸಾಧ್ಯವಾಗುವುದಿಲ್ಲ. ಇದು ಅಡಚಣೆಗೆ ಒಳಗಾದ ರಕ್ತನಾಳಗಳಿಂದ ರಕ್ತಸ್ರಾವ ಮತ್ತು ದ್ರವದ ಸೋರಿಕೆಗೆ ಕಾರಣವಾಗುತ್ತದೆ.


# ಲಕ್ಷಣಗಳು ಮತ್ತು ಚಿಹ್ನೆಗಳು

ರೆಟಿನಲ್ ವೇನ್ ಅಕ್ಲೂಶನ್ ನ ಪ್ರಾಥಮಿಕ ರೋಗಲಕ್ಷಣವೆಂದರೆ ಮಸುಕಾಗುವಿಕೆ, ವಿರೂಪಗೊಂಡ ಅಥವಾ ದೃಷ್ಟಿ ಕಳೆದುಕೊಳ್ಳುವುದಾಗಿದೆ; ಇದು ಸಾಮಾನ್ಯವಾಗಿ ಪ್ರಾರಂಭದಲ್ಲಿ ದಿಢೀರನೆ ಮತ್ತು ಸಾಮಾನ್ಯವಾಗಿ ಒಂದೇ ಕಣ್ಣಿನಲ್ಲಿ ಕಂಡುಬರುತ್ತದೆ.

# ಆರ್‌ವಿಓ ಯಾವುದರಿಂದ ಉಂಟಾಗುತ್ತದೆ?



ಅಥೆರೋಸ್ಲೆರೋಸಿಸ್


ಧೂಮಪಾನ




ಗ್ಲೌಕೊಮಾ


ಅಧಿಕ ರಕ್ತದೊತ್ತಡ


ಮ್ಯಾಕ್ಯುಲರ್ ಎಡಿಮಾ


ಮಧುಮೇಹ


ಅಧಿಕ ಕೊಲೆಸ್ಟ್ರಾಲ್


ರಕ್ತ ಹೆಪ್ಪುಗಟ್ಟುವಿಕೆಯ ಅಸ್ವಸ್ಥತೆಗಳು

# ಆರ್‌ವಿಓ ಅನ್ನು ಹೇಗೆ ರೋಗಪತ್ತೆ ಮಾಡಲಾಗುತ್ತದೆ?

ಆರ್‌ವಿಓ ಅನ್ನು ದೃಷ್ಟಿ ಮತ್ತು ಒತ್ತಡದ ತಪಾಸಣೆಗಳನ್ನು ಒಳಗೊಂಡಂತೆ, ನಿಮ್ಮ ಕಣ್ಣಿನ ಮೇಲ್ಮೈಗಳು ಮತ್ತು ನಾಳಗಳನ್ನು ಪರೀಕ್ಷಿಸುವ ಮೂಲಕ, ಸಮಗ್ರ ಕಣ್ಣಿನ ಪರೀಕ್ಷೆಯೊಂದಿಗೆ ರೋಗಪತ್ತೆ ಮಾಡಲಾಗುತ್ತದೆ. ಆರ್‌ವಿಓ ಅನ್ನು ಪತ್ತೆಮಾಡುವಲ್ಲಿ ಇರುವ ಇತರ ಪರೀಕ್ಷೆಗಳಲ್ಲಿ ಈ ಮುಂದಿನವು ಸೇರಿವೆ:


## ಆಪ್ತಲ್ಮಾಸ್ಕೋಪಿ

ಆಪ್ತಲ್ಮಾಸ್ಕೋಪಿಯು ರೆಟಿನಾದ ರಚನೆಯ ವಿವರವಾದ ನೋಟವನ್ನು ಒದಗಿಸುತ್ತದೆ.




## ಆಪ್ಟಿಕಲ್ ಕೊಹೆರೆನ್ಸ್ ಟೊಮೊಗ್ರಫಿ (ಓಸಿಟಿ)

ಇದು ಹೈ ರೆಸಲ್ಯೂಶನ್ ಚಿತ್ರಗಳೊಂದಿಗೆ ರೆಟಿನಾದ ಸ್ಪಷ್ಟ ಚಿತ್ರವನ್ನು ನೀಡುವ ರೋಗನಿರ್ಣಯದ ಒಂದು ತಂತ್ರವಾಗಿದೆ.



## ಫಂಡಸ್ ಫ್ಲೋರೊಸೀನ್ ಆಂಜಿಯೋಗ್ರಫಿ (ಎಫ್‌ಎಫ್‌ಎ)

ಇದು ರೆಟಿನಾ ರಕ್ತನಾಳಗಳ ಸ್ಥಿತಿಯ ಬಗ್ಗೆ ಹೆಚ್ಚಿನ ಮಾಹಿತಿ ನೀಡಲು ನಡೆಸಲಾಗುವ ಒಂದು ಸಾಮಾನ್ಯ ಕಾರ್ಯವಿಧಾನವಾಗಿದೆ. ನಿಮ್ಮ ತೋಳಿನೊಳಗೆ ಒಂದು ಬಣ್ಣವನ್ನು ಚುಚ್ಚಲಾಗುತ್ತದೆ, ಅದು ನಿಮ್ಮ ರೆಟಿನಾದ ನರಗಳನ್ನು ತಲುಪುತ್ತದೆ, ಮತ್ತು ಅಡೆತಡೆಗಳಿಗಾಗಿ ಅವುಗಳ ಛಾಯಾಚಿತ್ರ ತೆಗೆಯಲು ಅನುವು ಮಾಡಿಕೊಡುತ್ತದೆ.



# ಅರ್‌ವಿಓ ಗೆ ಹೇಗೆ ಚಿಕಿತ್ಸೆ ನೀಡಲಾಗುತ್ತದೆ?

## ಆ್ಯಂಟಿ–ವಿಇಜಿಎಫ್ ಚುಚ್ಚುಮದ್ದಿನ ಚಿಕಿತ್ಸೆ





ಆರ್‌ವಿಓ ದಲ್ಲಿ, ಮ್ಯಾಕುಲಾದಲ್ಲಿನ ರಕ್ತ ಮತ್ತು ದ್ರವ ಸೋರಿಕೆಯು ಊತವನ್ನು ಉಂಟುಮಾಡುತ್ತದೆ, ಇದು ಮ್ಯಾಕ್ಯುಲರ್ ಎಡಿಮಾ ಎಂದು ಕರೆಯಲಾಗುತ್ತದೆ; ಇದು ಮಸುಕಾಗುವಿಕೆ ಮತ್ತು/ಅಥವಾ ದೃಷ್ಟಿ ನಷ್ಟಕ್ಕೆ ಕಾರಣವಾಗುತ್ತದೆ. ಆಂಟಿ–ವಾಸ್ಕುಲರ್ ಎಂಡೋಥೀಲಿಯಲ್ ಗ್ರೋತ್ ಫ್ಯಾಕ್ಟರ್ (ಆಂಟಿ–ವಿಇಜಿಎಫ್) ಇಂಜೆಕ್ಷನ್, ರಕ್ತನಾಳಗಳಿಂದ ಸೋರಿಕೆಯನ್ನು ನಿಲ್ಲಿಸುತ್ತದೆ ಮತ್ತು ಮ್ಯಾಕ್ಯುಲರ್ ಎಡಿಮಾವನ್ನು ಕಡಿಮೆ ಮಾಡುತ್ತದೆ ಹಾಗೂ ಅನಂತರದಲ್ಲಿ ದೃಷ್ಟಿ ನಷ್ಟದ ಅಪಾಯವನ್ನು ಕಡಿಮೆ ಮಾಡುತ್ತದೆ. ಔಷಧದ ಪರಿಣಾಮವು ಒಂದು ತಿಂಗಳು ಅಥವಾ ಅದಕ್ಕಿಂತ ಹೆಚ್ಚು ಕಾಲ ಇರುತ್ತದೆ, ಆದ್ದರಿಂದ ನೀವು ಸ್ವೀಕರಿಸುವ ಚುಚ್ಚುಮದ್ದಿನ ಸಂಖ್ಯೆಯು ನಿಮ್ಮ ಸ್ಥಿತಿಯನ್ನು ಅವಲಂಬಿಸಿರುತ್ತದೆ ಮತ್ತು ನಿಮ್ಮ ವೈದ್ಯರ ಸಲಹೆಯ ಮೇರೆಗೆ ಇರುತ್ತದೆ.

ಆ್ಯಂಟಿ–ವಿಇಜಿಎಫ್ ಚುಚ್ಚುಮದ್ದಿನೊಂದಿಗಿನ ಚಿಕಿತ್ಸೆಯು ಪ್ರಮುಖ ದೃಶ್ಯ ಗುಣಗಳನ್ನು (ಬಣ್ಣ, ಹೊಳಪು ಮತ್ತು ತೀಕ್ಷ್ಣತೆ) ಮತ್ತು ಓದುವುದು, ದೂರದರ್ಶನವನ್ನು ವೀಕ್ಷಿಸುವುದು, ಕಾರ್ ಡ್ರೈವಿಂಗ್ ಮುಂತಾದ ಜೀವನದ ಗುಣಮಟ್ಟದ ಮೇಲೆ ಪ್ರಭಾವ ಬೀರುವಂತಹ ಹಲವಾರು ಚಟುವಟಿಕೆಗಳನ್ನು ಸುಧಾರಿಸಬಹುದು.











## ಕಾರ್ಟಿಕೊಸ್ಟೆರಾಯ್ಡ್ ಚಿಕಿತ್ಸೆ

ಸ್ಟೆರಾಯ್ಡ್ ಗಳು ರಕ್ತನಾಳದ ಗೋಡೆಯನ್ನು ಸ್ಥಿರಗೊಳಿಸುತ್ತದೆ ಮತ್ತು ವ್ಯಾಸ್ಕುಲಾರ್ ಪರ್ಮಿಯೆಬಿಲಿಟಿಯನ್ನು ಕಡಿಮೆ ಮಾಡುತ್ತದೆ. ಇದನ್ನು ಇಂಟ್ರಾವಿಟ್ರಿಯಲ್ ಇಂಜೆಕ್ಷನ್ ಅಥವಾ ನಿರಂತರ-ಬಿಡುಗಡೆಯ ಇಂಪ್ಲಾಂಟ್ ಆಗಿ ಸಹ ನೀಡಬಹುದು.


## ಲೇಸರ್ ಫೋಟೊಕೊಆಗ್ಯುಲೇಶನ್


ಸಿಆರ್‌ವಿಓ ರೋಗಿಗಳಲ್ಲಿ ಮ್ಯಾಕ್ಯುಲರ್ ಎಡಿಮಾ ಚಿಕಿತ್ಸೆಯಲ್ಲಿ ಗ್ರಿಡ್ ಲೇಸರ್ ಫೋಟೊಕೊಆಗ್ಯುಲೇಶನ್ ಪರಿಣಾಮಕಾರಿ-ಯಾಗಿಲ್ಲ. ಚಿಕಿತ್ಸೆ ಪಡೆಯದ ರೋಗಿಗಳಿಗೆ ಹೋಲಿಸಿದರೆ ಇದು ದೃಷ್ಟಿಯಲ್ಲಿ ಯಾವುದೇ ಪ್ರಯೋಜನವನ್ನು ನೀಡುವುದಿಲ್ಲ ಮತ್ತು ಇದರಿಂದಾಗಿ ಸಿಆರ್‌ವಿಓ ರೋಗಿಗಳಿಗೆ ಶಿಫಾರಸು ಮಾಡುವುದಿಲ್ಲ.





## ರೂಢೀಗತ ಆರೈಕೆ


ಈ ರೋಗವು ರಕ್ತನಾಳಗಳಲ್ಲಿ ಕಂಡುಬರುವುದರಿಂದ, ನಿಮ್ಮ ರಕ್ತನಾಳಗಳನ್ನು ಸಂರಕ್ಷಿಸುವ ಮೂಲಕ ಮತ್ತು ಆರೋಗ್ಯಕರ ವ್ಯಾಸ್ಕುಲಾರ್ ಅಂಗಾಂಶವನ್ನು ನಿಭಾಯಿಸುವ ಮೂಲಕ, ನಿಮ್ಮ ಅಪಾಯವನ್ನು ಕಡಿಮೆ ಮಾಡಬಹುದು. ಆರೋಗ್ಯಕರ ಜೀವನಶೈಲಿ ಮತ್ತು ಆಹಾರದ ಬದಲಾವಣೆಗಳಲ್ಲಿ ಈ ಮುಂದಿನವುಗಳು ಸೇರಿವೆ:


ಧೂಮಪಾನವನ್ನು ತಪ್ಪಿಸಿ


ನಿಮ್ಮ ರಕ್ತದಲ್ಲಿನ ಸಕ್ಕರೆ ಮತ್ತು ಕೊಲೆಸ್ಟ್ರಾಲ್ ಮಟ್ಟವನ್ನು ನಿಭಾಯಿಸಿ


ದಿನವೂ ವ್ಯಾಯಾಮ ಮಾಡಿ


ವರ್ಷಕ್ಕೊಮ್ಮೆಯಾದರೂ ಕಣ್ಣಿನ ತಪಾಸಣೆ ಮಾಡಿಸಿ


ಗಾಢ ಬಣ್ಣದ, ಹಸಿರು ತರಕಾರಿಗಳನ್ನು ಸಾಕಷ್ಟು ಸೇವಿಸಿ

ನಿಯಮಿತವಾಗಿ ಕಣ್ಣಿನ ಪರೀಕ್ಷೆಗಳನ್ನು ಮಾಡಿಸಿಕೊಳ್ಳುವುದರಿಂದ, ನಿಮ್ಮ ವೈದ್ಯರು ಯಾವುದೇ ಕಣ್ಣಿನ ಕಾಯಿಲೆಗಳನ್ನು ಮೊದಲೇ ಪತ್ತೆಹಚ್ಚಲು ಮತ್ತು ರೋಗನಿರ್ಣಯ ಮಾಡಲು ಸಹಾಯ ಮಾಡುತ್ತದೆ.

**Disclaimer:** This material is for information purpose only. It does not replace the advice or counsel of a doctor or healthcare professional. We make every effort to provide accurate and timely information but make no guarantees in this regard. You should consult comply with only on the advice of your ophthalmologist or healthcare professional.

RAZUMAB™
Ranibizumab 0.5 mg Injection

INTAS

Scan the QR Code to know more about Razumab

ENGLISH 2160450

**INTAS PHARMACEUTICALS LIMITED**
Near Sola Bridge, S.G. Highway, Thaltej,
Ahmedabad – 380054, Gujarat, INDIA.
Website : www.intaspharma.com